SC:77/2020
PW:32

ಕರ್ನಾಟಕ ಸರ್ಕಾರ (ಸಿ.ಆರ್.ಪಿ67)

| |
|---|
| ಹೇಳಿಕೆ ಹಾಳೆ<br>ಆರ್.ಪಿ. ಸಂಖ್ಯೆ 57<br>ನಮೂನೆ ಸಂಖ್ಯೆ 4<br>(ಸಿವಿಲ್) |

# 3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ

## ಸತ್ರ ಪ್ರಕರಣ ಸಂಖ್ಯೆ: 77/2020

| | |
|---|---|
| PW | 32 |

**ಸಾಕ್ಷಿಯನ್ನು ಕರೆಯಿಸಿ ಸತ್ಯ ಬೋಧನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ** 07.02.2025

| | | |
|---|---|---|
| ಸಾಕ್ಷಿಯ ಹೆಸರು | : | ಎಂ. ಮಂಜುನಾಥ್ |
| ತಂದೆಯ/ಗಂಡನ ಹೆಸರು | : | ಲೇಟ್ ಮುನಿಸ್ವಾಮಿ |
| ವಯಸ್ಸು | : | 53 ವರ್ಷ |
| ಉದ್ಯೋಗ | : | ಸಿ.ಪಿ.ಐ. ಚಿಕ್ಕಬಳ್ಳಾಪುರ |
| ವಾಸಸ್ಥಳ | : | ಚಿಕ್ಕಬಳ್ಳಾಪುರ |

**ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರಿಂದ:**

1. ನಾನು ದಿನಾಂಕ 20.09.2023 ರಿಂದ ಚಿಕ್ಕಬಳ್ಳಾಪುರ ಸಿ.ಪಿ.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 18.10.2023 ರಂದು FSL ವರದಿಯನ್ನು ಪಡೆದು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸದರಿ ವರದಿಯಲ್ಲಿ 2 ನೇ ಆರೋಪಿಗೆ ಸಂಬಂಧಿಸಿದ ಸ್ಯಾಮ್ ಸಂಗ್ ಮೊಬೈಲ್ ಫೋನ್ ಲಾಕ್ ಆಗಿದ್ದ ಕಾರಣ ಅದರ ಬಗ್ಗೆ ತಜ್ಞರು ವರದಿ ನೀಡಿರುವುದಿಲ್ಲ. ದಿ: 13.12.2023 ರಂದು 2 ನೇ ಆರೋಪಿಯ ಮೊಬೈಲ್ ಫೋನ್ ಕಂಪನಿಯಿಂದ ಫೋನ್ ಅನ್ನು ಅನ್ ಲಾಕ್ ಮಾಡಿಸಲು ಹಾಗೂ ಡಾಟಾ ಎಕ್ಸ್ಟ್ರಾಕ್ಟ್ ಮಾಡಿಸಲು ನ್ಯಾಯಾಲಯಕ್ಕೆ ಅನುಮತಿ ಕೋರಿರುತ್ತೇನೆ. ಅದರಂತೆ ದಿ: 17.02.2024 ರಂದು

ನ್ಯಾಯಾಲಯದಿಂದ ಅನುಮತಿ ಪಡೆದಿರುತ್ತೇನೆ. ನಂತರ ದಿಃ 05.03.2024 ರಂದು ಸಂಬಂಧಪಟ್ಟ ಸ್ಯಾಮ್ ಸಂಗ್ ಕಂಪನಿಗೆ 2 ನೇ ಆರೋಪಿಯ ಮೊಬೈಲ್ ಫೋನ್ ಅನ್ ಲಾಕ್ ಮಾಡಿಸಲು ಇ–ಮೇಲ್ ಮೂಲಕ ಮನವಿ ಸಲ್ಲಿಸಿರುತ್ತೇನೆ. ದಿಃ 12.03.2024 ರಂದು ಪಿಸಿ ನಂಬರ್ 82 ಇವರ ಮುಖಾಂತರ ಡಾಟಾ ಎಕ್ಸ್ ಟ್ರಾಕ್ಟ್ ಮಾಡಿಸಲು ಮೊಬೈಲ್ ಫೋನ್ ಅನ್ನು ಕಳುಹಿಸಿರುತ್ತೇನೆ. ದಿಃ 06.07.2024 ರಂದು FSL ವರದಿ ಸ್ವೀಕರಿಸಿರುತ್ತೇನೆ.

3. ಸಾಕ್ಷಿದಾರರು ತಾನು ಪಡೆದ FSL ವರದಿ, ಸಿಡಿ, ಮಾದರಿ ಸೀಲು, ಕಲಂ 65 ಬಿ ಸರ್ಟಿಫಿಕೇಟ್ ಅನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ–69 ರಿಂದ ನಿಪಿ–72 ಎಂದು ಗುರುತಿಸಲಾಯಿತು. ಸಾಕ್ಷಿದಾರರು ನಿಪಿ–69 ರಲ್ಲಿ ಇರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–69(ಎ) ಎಂದು ಗುರುತಿಸಲಾಯಿತು. ನಾನು FSL ಗೆ ಕಳುಹಿಸಿದ ಮೊಬೈಲ್ ಫೋನ್ ಅನ್ನು ನೋಡಿದಲ್ಲಿ ಗುರುತಿಸುತ್ತೇನೆ. ಸಾಕ್ಷಿದಾರರು ಮು.ಮಾ.15 ಅನ್ನು ನೋಡಿ ಗುರುತಿಸಿರುತ್ತಾರೆ.

4. ದಿಃ 29.07.2024 ರಂದು FSL ತಜ್ಞರನ್ನು ಸಾಕ್ಷಿದಾರರನ್ನಾಗಿ ಪರಿಗಣಿಸುವಂತೆ ಕೋರಿ ನ್ಯಾಯಾಲಯಕ್ಕೆ ಹೆಚ್ಚುವರಿ ದೋಷಾರೋಪಣಾ ಪತ್ರ ಸಲ್ಲಿಸಿರುತ್ತೇನೆ.

**ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀ ಪಿ.ಎಸ್. ವಕೀಲರಿಂದಃ**

5. ನಾನು ನಿಪಿ–69 ರಿಂದ ನಿಪಿ–72 ದಾಖಲೆಗೆ ಸಂಬಂಧಿಸಿದಂತೆ ತನಿಖೆ ಮಾಡುವ ಸಮಯಕ್ಕೆ ನ್ಯಾಯಾಲಯಕ್ಕೆ ದೋಷಾರೋಪಣ ಪತ್ರ, ಹೆಚ್ಚುವರಿ ದೋಷಾರೋಪಣಾ ಪತ್ರ ಸಲ್ಲಿಸಿ, ಸಾಕ್ಷಿಯ ವಿಚಾರಣೆ ಪ್ರಾರಂಭ ಆಗಿತ್ತು ಎಂದರೆ ಸರಿ. ಮು.ಮಾ.15 ಮೊಬೈಲ್ ಗೆ ಸಂಬಂಧಿಸಿದಂತೆ FSL ವರದಿ ನಂತರ ಬಂದಿದ್ದ ಕಾರಣ ನಾನು ಹೆಚ್ಚುವರಿ ತನಿಖೆ

ಕೈಗೊಂಡಿರುತ್ತೇನೆ. ನಾನು ತನಿಖೆ ಕೈಗೊಂಡಾಗ ಮು.ಮಾ.15 ಮೊಬೈಲ್ 2 ನೇ ಆರೋಪಿಗೆ ಸೇರಿದ್ದು ಎಂದು ತಿಳಿದುಬಂದಿತ್ತು. ನಿಪಿ–69 ವರದಿಯಲ್ಲಿ ಯಾವುದೇ ವಾಟ್ಸಪ್ ಡೀಟೇಲ್ಸ್ ಕಾಲ್ ರೆಕಾರ್ಡ್ ಡಿಟೇಲ್ಸ್ ಹಾಗೂ ಎಸ್.ಎಂ.ಎಸ್. ಮೆಸೇಜ್ ಗಳು ಯಾವುದೂ ಮೊಬೈಲ್ ನಲ್ಲಿ ಲಭ್ಯ ಇಲ್ಲ ಎಂದು ತಿಳಿಸಿರುತ್ತಾರೆ. ನನಗೆ FSL ವರದಿಯಂತೆ ಯಾವುದೂ ಡೀಟೇಲ್ಸ್ ಮೊಬೈಲ್ ನಲ್ಲಿ ಲಭ್ಯ ಇಲ್ಲದೇ ಇರುವ ವಿಚಾರ ತಿಳಿದಿದ್ದರೂ ಸಹ ನಾನು ಅನಾವಶ್ಯಕವಾಗಿ ನ್ಯಾಯಾಲಯದಿಂದ ಮು.ಮಾ.15 ಮೊಬೈಲ್ ಪಡೆದು ತನಿಖೆ ಮಾಡಿರುವುದಾಗಿ ಹೇಳಿ ಸುಳ್ಳು ಹೆಚ್ಚುವರಿ ದೋಷಾರೋಪಣಾ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 2 ನೇ ಆರೋಪಿ ಪರ ಶ್ರೀ ಹೆಚ್.ಆರ್.ವಿ. ವಕೀಲರಿಂದಃ</u>**

6. ನಾನು ತನಿಖೆ ಕೈಗೊಂಡಾಗ ಮು.ಮಾ.15 ಮೊಬೈಲ್ ಅನ್ನು ಆನ್ ಮಾಡಿ ಅದರಲ್ಲಿ ಏನಾದರೂ ಕಾಲ್ ರೆಕಾರ್ಡ್ಸ್ ಅಥವಾ ಮೆಸೇಜ್ ಗಳು ಇರುವ ಬಗ್ಗೆ ಪರಿಶೀಲಿಸಿಲ್ಲ.

ಶ್ರೀ ಹೆಚ್.ಆರ್.ವಿ ವಕೀಲರು ಶ್ರೀ ಪಿ.ಎಸ್. ವಕೀಲರ ಪಾಟೀಸವಾಲನ್ನು ಅಳವಡಿಸಿಕೊಳ್ಳುವುದಾಗಿ ನುಡಿದಿರುತ್ತಾರೆ.

**<u>ಮರುವಿಚಾರಣೆಃ</u> ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ದಿನಾಂಕ** 07.02.2025 **ರಂದು ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು** )

ಓದಿ ಹೇಳಿ ಕೇಳಿ ಸರಿ ಇದೆ

ಸಹಿ/–

**(ಎಸ್. ಶ್ರೀಧರ)**

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.